ಭಾವಿಸಿದಾಗ... ಕನಿಷ್ಠ ಮೂರು ಬಾರಿಯಾದರೂ ಬದುಕಿಗೆ ತಾವೇ ಅಂತ್ಯ ಹಾಡಿಕೊಳ್ಳಬೇಕು ಎಂದು ಭಾವಿಸಿಯೇ ಇರುತ್ತಾರೆ. ಭಾವಿಸಿದ ಕೂಡಲೇ ಭಾವಿಸಿದ ಹಾಗೆ ಮುಂದಡಿಯಿಡಲು ಸಾಧ್ಯವಿಲ್ಲವಲ್ಲ!

ನಮ್ಮ ಕೈಯಿಂದಲೇ ನಮ್ಮ ಬದುಕನ್ನು ಇಲ್ಲವಾಗಿಸಿಕೊಳ್ಳುವುದು...

'ಅದು ಧೈರ್ಯವೇ... ಅಥವಾ ಆ ಕ್ಷಣದ ಒಂದು ಅರಿವಿಲ್ಲದ ಕ್ರಿಯೆಯೇ...!?' ನಿನ್ನೆ ನಡುರಾತ್ರಿಯಿಂದ ಕನಿಷ್ಠ ಸಾವಿರ ಬಾರಿ ಈ ಪ್ರಶ್ನೆ ಇವನ ಮನದಲ್ಲಿ ಪ್ರತಿಧ್ವನಿಸಿತ್ತು.

'ನಾನೆಲ್ಲಾದರೂ ನೇಣು ಹಾಕಿಕೊಳ್ಳುವ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವ ಕಡೆಗೆ ಗಂಭೀರವಾಗಿ ನಡೆದದ್ದುಂಟೇ?' ತನಗೆ ತಾನೇ ಪ್ರಶ್ನೆ ಹಾಕಿಕೊಂಡಿದ್ದ. ಕೈಬಿಟ್ಟವಳು ಮತ್ತು ಮಗು ದೂರವಾದಾಗ ಮನಸ್ಸಿಗೆ ಬಹಳ ವೇದನೆಯಾಗಿದ್ದರೂ, ಸ್ಯಾನ್ ಹೋಸ್ ಎಂಬ ಭ್ರಮಾಲೋಕದಿಂದ ಹೊರಬಿದ್ದು ಮರಳಿ ಮಣ್ಣಿಗೆ ಬರುವ ಯತ್ನದ ನಡುವೆ ಆ ನೋವನ್ನು ತಡೆದುಕೊಂಡಿದ್ದ.

ಇನ್ನು ಕೈಕೊಟ್ಟವಳು ದೂರ ಸರಿದಾಗ... ಹಾ!

ಒಮ್ಮೆ ಆತ್ಮಹತ್ಯೆಯ ಬಗ್ಗೆ ಯೋಚಿಸಿದ್ದೆನಲ್ಲಾ!

ಕೈಕೊಟ್ಟ ಅವಳು ಆರೇ ತಿಂಗಳಲ್ಲಿ ಬೇರೊಬ್ಬನನ್ನು ಮದುವೆಯಾಗಿ ಆಸ್ಟ್ರೇಲಿಯಾಕ್ಕೆ ಹಾರಿ ಹೋದದ್ದನ್ನು ಕೇಳಿದ ಸಂದರ್ಭವಿರಬೇಕು. ಒಂದು ಬಾರಿ ಗೊತ್ತಿದ್ದ ಒಂದು ಮೆಡಿಕಲ್ ಶಾಪ್‌ಗೆ ಹೋಗಿ ಒಂದಿಷ್ಟು ನಿದ್ರೆ ಮಾತ್ರೆ ಖರೀದಿ ಮಾಡಿಕೊಂಡು ಬಂದದ್ದೂ ಆಗಿತ್ತು. ಆನಂತರ ಅವಳಿಗೇ ಇಲ್ಲದ್ದು ನನಗೇನು ಎಂದೆನಿಸಿ ಮಾತ್ರೆಗಳನ್ನು ಕಮೋಡ್‌ಗೆ ಸುರಿದು ಫ್ಲಶ್ ಮಾಡಿದ್ದ ಇವನು.

ನಂತರದ ದಿನಗಳಲ್ಲಿ 'ಪ್ರೀತಿಪ್ರೇಮ'ದ ಸುಳಿಗೆ ಸಿಲುಕದೇ 'ಕಾಮ'ದ ಸುಂಟರ ಗಾಳಿಯೆದ್ದಾಗ 'ಸೀಕಿಂಗ್' ಮೊರೆ ಹೋಗಿ, ಎರಡು-ಮೂರು ಗಂಟೆ ಎಲ್ಲೋ, ಹಣ ತೆತ್ತು ಪರಿಚಯವೇ ಇಲ್ಲದೇ ದೇಹದ ಜೊತೆಯಲ್ಲಿ ಒದ್ದಾಡಿ, ಎಲ್ಲವನ್ನೂ ಕೊಡವಿ ಮನೆಗೆ ಬಂದು ಷವರ್ ಮಾಡಿ ತಣ್ಣಗೆ ಮಲಗುವುದು ಅಭ್ಯಾಸವಾಗಿತ್ತು.

ಅದಾದ ಮೇಲೆ ಕೂಡ ಬಹಳ ಬೇಸರವಾದರೆ, ಒಂಟಿತನ ಕಾಡಿದರೆ ಮೂರ್ನಾಲ್ಕು ಪೆಗ್ 'ಓಲ್ಡ್ ಮಾಂಕ್' ಏರಿಸಿ ನಶೆ ಏರಿದ ಮೇಲೆ ಬೆಡ್ ಮೇಲೆ ಉರುಳಿಕೊಂಡ ದಿನಗಳು ಸರ್ವೇ ಸಾಮಾನ್ಯವಾಗಿದ್ದವು. ನಿನ್ನೆ ರಾತ್ರಿ ಕೂಡ... ಅಮ್ಮ-ಅಪ್ಪ ಬಹಳ ಕಾಡಿದ್ದರು.

ಅದೂ ಅಮ್ಮ!

ಅವಳೇಕೆ ಈಗಲೂ ಇವನನ್ನು ಇಷ್ಟು ಕಾಡಿಸುತ್ತಾಳೆ ಎನ್ನುವುದು ಇವನಿಗೂ ಅರ್ಥವಾಗಿಲ್ಲ. ತಿಂಗಳಿಗೆ ಕನಿಷ್ಠ ನಾಲ್ಕಾರು ಬಾರಿಯಾದರೂ ಕನಸಲ್ಲಿ ಬಂದು 'ಮಗ ಉಂಡ್ಯಾ' ಎನ್ನುವ ಅವಳ ಮುಗ್ಧ ಮುಖ ಮತ್ತು ದನಿ ಇವನನ್ನು ಹಗಲು- ರಾತ್ರಿ ಕಾಡುತ್ತಲೇ ಇರುತ್ತದೆ.

ಅಮ್ಮ ಸತ್ತ ಮೇಲೆ...

ಕಾಮ ಕೂಡ ಸಂಪೂರ್ಣವಾಗಿ ಸತ್ತು ಹೋದಂತಿದೆ.

ಅದೆಲ್ಲವನ್ನೂ ಮರೆಯಲು 'ಓಲ್ಡ್ ಮಾಂಕ್'. ಹಾಗೆ ನಿನ್ನೆ ರಾತ್ರಿ ನಶೆ ಏರಿಸಿಕೊಂಡು ಬಿದ್ದ ಮೇಲೆಯೇ ನಡುರಾತ್ರಿ ಅಣ್ಣನ ಆತ್ಮಹತ್ಯೆಯ ಸುದ್ದಿ ಬಂದು ಅಪ್ಪಳಿಸಿದ್ದು.

ಬೆಳಗ್ಗೆ ಒಂಬತ್ತೂವರೆಗೆ ಮಂಗಳೂರು ವಿಮಾನ ನಿಲ್ದಾಣದಲ್ಲಿ ಇಳಿದವನನ್ನು ಕರೆದುಕೊಂಡು ಹೋಗಲು ಮನೆಯಿಂದ ಕಾರು ಬಂದಿತ್ತು. ಮನೆ ತಲುಪುವಷ್ಟರಲ್ಲಿ ಊರವರು, ನೆಂಟರು ಬಂದು ನೆರೆದಿದ್ದರು. ಮನೆಯ ಮುಂದಿನ ಬಲಭಾಗದ ತೋಟದ ಕೊನೆಯಲ್ಲಿ ಸಂಸ್ಕಾರಕ್ಕೆ ಸಿದ್ಧತೆ ಮಾಡಿಕೊಂಡು ಇವನು ಮನೆಯ ಮುಂದೆ ಬಂದು ಕುಳಿತಾಗ ಮಂಕಿಯ ಮಾವ ನೋಡಿಯೂ ನೋಡದಂತೆ ಆಚೆ ಹೋದಾಗ 'ಹೆಚ್ಚಿನ ಪಕ್ಷ ಗುರುತು ಸಿಕ್ಕಿರಲಿಕ್ಕಿಲ್ಲ' ಎಂದುಕೊಂಡ.

ಊರ ಮನೆ. ಈಗ ಕೂಡ ಮೊಬೈಲ್ ಸಿಗ್ನಲ್ ಸಿಗದ ನಿಗೂಢ ಲೋಕ. ಹುಬ್ಬಳ್ಳಿಯಿಂದ ಶವ ಹೇರಿಕೊಂಡ ಆಂಬುಲೆನ್ಸ್ ಹೊರಟಿದ್ದೇ ಮಧ್ಯಾಹ್ನ ಹನ್ನೆರಡಕ್ಕೆ. ಊರು ತಲುಪಲು ಕನಿಷ್ಠ ನಾಲ್ಕು ಗಂಟೆಯಾದರೂ ಬೇಕು. ಸಂಜೆ ಐದಾರೂ ಆಂಬುಲೆನ್ಸ್ ಮತ್ತು ಅದರ ಜೊತೆ ಹುಬ್ಬಳ್ಳಿಯಿಂದ ಹೊರಟಿದ್ದ ನೆಂಟರನ್ನು ತುಂಬಿಕೊಂಡಿದ್ದ ಕಾರುಗಳ ಪೈಕಿ ಒಂದು ಕೂಡ ಮನೆಯಂಗಳವನ್ನು ತಲುಪಿರಲಿಲ್ಲ.

ಈ ನಡುವೆ ಕುಟುಂಬದ ಪುರೋಹಿತರಿಗೆ